# 1

# ಹಳೇ ಒಡಂಬಡಿಕೆಯಲ್ಲಿ ಧರ್ಮಾಚರಣೆ ಹಾಗೂ ತಿಳುವಳಿಕೆ

*"ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ, ಇದ್ದರೆ, ಸಮರ್ಪಿಸೇನು, ಸರ್ವಾಂಗ ಹೋಮಗಳಲ್ಲಿ ನಿನಗೆ ಸಂತೋಷವಿಲ್ಲ. ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟ ಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ" (ಕೀರ್ತನೆ 51:16, 17).*

ಬಾಪ್ತಿಸ್ಮದ ಕಾರ್ಯಕ್ಕೆ ಪಾಪಗಳನ್ನು ತೆಗೆದುಹಾಕಲು ಸಹಜವಾದ ಶಕ್ತಿ ಅಥವಾ ಸಾಮರ್ಥ್ಯವಿಲ್ಲದಿರುವ ಸಂಗತಿಯ ಆಧಾರದ ಮೇಲೆ, ಬಾಪ್ತಿಸ್ಮವು ಆಚರಣೆಗಿಂತ ಅಥವಾ ಧಾರ್ಮಿಕ ಆಚಾರಕ್ಕಿಂತ ಹೆಚ್ಚಾಗಿರುವದಿಲ್ಲ ಎಂದು ಕೆಲವರು ಯೋಚಿಸುತ್ತಾರೆ. ಬಾಪ್ತಿಸ್ಮದ ಸ್ವರೂಪವನ್ನು ತೀರ್ಮಾನಿಸಲು ಹುಡುಕುವಲ್ಲಿ, ಈ ಪ್ರಶ್ನೆಯು ಕೇಳಲ್ಪಡತಕ್ಕದ್ದು, "ದೇವರೊಂದಿಗೆ ನಮ್ಮ ಸಂಬಂಧವನ್ನು ಒಳಪಡಿಸುವುದಕ್ಕೆ ಕೇವಲ ಉದ್ದೇಶ ವಿಲ್ಲದ ಆಚಾರ, ವಿಧಿಯ, ಸಂಸ್ಕಾರ, ಧರ್ಮಾಚರಣೆಯಾಗಿರುವ ಕೃತ್ಯವನ್ನು ಮಾತ್ರ ಹಳೇ ಇಲ್ಲವೇ ಹೊಸ ಒಡಂಬಡಿಕೆಯು ಬಯಸುವುದೋ?" ಒಬ್ಬನ ಹೃದಯದಲ್ಲಿ ಏನಾದರೂ ಇರಲಿ ಬಿಡಲಿ, ದೇವರು ಕೃತಿಯ ನಿಮಿತ್ತವಾಗಿ ಎಂದಾದರೂ ಕೃತಿಯನ್ನು ಸ್ವೀಕರಿಸುವನೋ?

ದೇವರಿಗೆ ಉತ್ತರವಾಗಿರುವ ಎಲ್ಲಾ ಕೃತ್ಯಗಳು ಒಂದೇ ರೀತಿಯ ಸೂತ್ರಗಳನ್ನು ಒಳ ಗೊಂಡಿರುವದಿಲ್ಲ. ಒಬ್ಬ ವ್ಯಕ್ತಿಯು ದೇವರಿಗೆ ಸ್ವೀಕಾರ ಯೋಗ್ಯವಾಗಿರಲು ಅಥವಾ ದೇವರಿಂದ ಆಶೀರ್ವಾದವನ್ನು ಹೊಂದಲು ಅವಶ್ಯವಾಗಿರುವ ಕಡಿಮೆಪಕ್ಷ ಐದು ಮೂಲ ಸೂತ್ರಗಳಿವೆ:

(1) ಒಬ್ಬ ವ್ಯಕ್ತಿಯ ಯೋಗ್ಯತೆಯ ಯಾವುದೇ ಕೆಲಸವಿಲ್ಲದ ವಿಶ್ವಾಸದ ಆಧಾರದ ಮೇಲೆ ಆಶೀರ್ವಾದವು ಕೊಡಲ್ಪಡಬಹುದು.

(2) ಕುರುಡು ವಿಧೇಯತೆಯ ಬೇಕಾಗಿರುವದರ ಮೇಲಿನ ನಂಬಿಕೆಯ ಮೇಲೆ, ಅಂದರೆ ಅರ್ಥ ಮಾಡಿಕೊಳ್ಳದೆ ಅಥವಾ ಆಶೀರ್ವಾದದಲ್ಲಿಯ ನಂಬಿಕೆಯ ಕಾರ್ಯದ ಮೇಲೆ ಆವಲಂಭಿಸಿ ಆಶೀರ್ವಾದವು ಕೊಡಲ್ಪಡಬಹುದು.

(3) ವಿಶ್ವಾಸ ಮತ್ತು ಆಶೀರ್ವಾದವನ್ನು ಸಾಧಿಸುವ ಕೃತ್ಯದ ಆಧಾರದ ಮೇಲೆ ಆಶೀರ್ವಾದವು ಕೊಡಲ್ಪಡಬಹುದು.

(4) ವಿಶ್ವಾಸ ಮತ್ತು ತನ್ನಲ್ಲಿ ಹಾಗೂ ತನ್ನಷ್ಟಕ್ಕೆ ಲಾಭ ಸಾಧಿಸಲಾರದ ಕೃತ್ಯ, ಅವುಗಳ ಮೇಲೆ ಅವಲಂಭಿಸಿ ಆಶೀರ್ವಾದವು ಕೊಡಲ್ಪಡಬಹುದು. ಅಂಥ ಕಾರ್ಯವು ಆಶೀರ್ವಾದಕ್ಕಾಗಿ ನಿರೀಕ್ಷಿಸಲ್ಪಟ್ಟದ್ದರೊಂದಿಗೆ ಯಾವುದೇ ಸಹಜವಾದದ್ದು ಸಂಭವಿಸ ಲಾರದು. ಆದರೆ ಲಾಭ ಒದಗಿಸಲಿಕ್ಕೆ ದೇವರಲ್ಲಿಯ ವಿಶ್ವಾಸದ ಕಾರಣದಿಂದ ಅದು ಹಿಂಬಾಲಿಸಲ್ಪಡುತ್ತಲಿದೆ.

(5) ವಿಶ್ವಾಸವಿದ್ದವರಿಗಿಂತ ಹೆಚ್ಚಾಗಿ ಇತರರಿಗೆ ಆಶೀರ್ವಾದವು ಇಲ್ಲವೇ ನೆರವೇರುವಿಕೆಯು ಕೊಡಲ್ಪಡಬಹುದು.

ಈ ಐದು ಮೂಲ ಸೂತ್ರಗಳಲ್ಲಿ ನಾಲ್ಕು (ಕುರುಡು ಅವಿಧೇಯತೆಯನ್ನು ಹೊರತು ಪಡಿಸಿ) ಸೂತ್ರಗಳು ಒಂದು ರೀತಿಯಲ್ಲಿ ಆಶೀರ್ವಾದದಲ್ಲಿ ವಿಶ್ವಾಸವಿಡುವದರ ಮೇಲೆ ಅವಲಂಭಿಸಿದೆ; ಹೀಗಿದ್ದರೂ ದೇವರನ್ನು ಮೆಚ್ಚಿಸುವದರಲ್ಲಿ ಮತ್ತು ಆಶೀರ್ವಾದವನ್ನು ಸ್ವೀಕರಿಸಲು ಅವಶ್ಯವಾದ ತಿಳುವಳಿಕೆ ಮತ್ತು ಕೃತಿಯು ದೇವರು ಕೇಳಿರುವದಕ್ಕಿಂತ ಭಿನ್ನವಾಗಿರುತ್ತವೆ. ಇವುಗಳ ಕೆಲವು ಬೈಬಲ್ ಉದಾಹರಣೆಗಳನ್ನು ಯೋಚಿಸೋಣ:

### (1) ಮಾನವ ಯೋಗ್ಯತೆಯ ಕಾರ್ಯವಿಲ್ಲದ ವಿಶ್ವಾಸ

ಅಬ್ರಹಾಮನ ಜೀವನದಲ್ಲಿಯ ಕೃತ್ಯವಿಲ್ಲದ ಅಥವಾ ಮಾನವ ಯೋಗ್ಯತೆಯಿಲ್ಲದ ಒಂದು ಘಟನೆಯು ವಿಶ್ವಾಸದ ಆಧಾರದ ಮೇಲೆ ಆಶೀರ್ವಾದವು ಕೊಡಲ್ಪಟ್ಟ ಒಂದು ಉದಾಹರಣೆಯನ್ನು ಒದಗಿಸುತ್ತದೆ. ಆಕಾಶದಲ್ಲಿಯ ನಕ್ಷತ್ರಗಳ ಸಂಖ್ಯೆಯಷ್ಟೇ ಅವನ ಸಂತತಿಯು ಆಗುವದೆಂದು ದೇವರು ಅಬ್ರಹಾಮನಿಗೆ ಹೇಳಿದನು. "ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (ಆದಿಕಾಂಡ 15:6). ಈ ವಿಷಯದಲ್ಲಿ ಅಬ್ರಹಾಮನ ಪರವಾಗಿ ದೇವರು ಯಾವ ಕೃತ್ಯವನ್ನು ಬಯಸಲಿಲ್ಲ. ಆದರೆ ಅವನ ವಿಶ್ವಾಸದ ಆಧಾರದ ಮೇಲೆ ಅವನನ್ನು ನೀತಿವಂತನೆಂದು ಸ್ವೀಕರಿಸಿದನು.

### (2) ಕುರುಡು ವಿಧೇಯತೆ

ಕುರುಡು ವಿಧೇಯತೆಯು 2 ಅರಸು 13:14-19ರಲ್ಲಿ ಕಂಡು ಬರುತ್ತದೆ. ಎಲೀಷನು ಅರಸ ಯೋವಾಷನಿಗೆ ಕಿಡಿಕಿಯನ್ನು ತೆರೆದು ಮೂಡಣದ ದಿಕ್ಕಿಗೆ ಬಾಣವನ್ನೆಸೆ ಎಂದು ಹೇಳಿದನು. ಯೋವಾಷನು ಬಾಣವನ್ನು ಎಸೆದನು. "ಇದು ಜಯಪ್ರದವಾದ ಯೆಹೋವನ ಬಾಣ, ಅರಾಮ್ಯರನ್ನು ಜಯಿಸುವ ಬಾಣ. ನೀನು ಅರಾಮ್ಯರನ್ನು ಅಫೇಕ ದಲ್ಲಿ ಸೋಲಿಸಿ ಸಂಹರಿಸಿ ಬಿಡುವಿ" (2 ಅರಸು 13:17) ಎಂದು ಎಲೀಷನು ಹೇಳಿದನು. ಆಗ ಎಲೀಷನು ಅರಸ ಯೋವಾಷನಿಗೆ ಬಾಣಗಳನ್ನು ತೆಗೆದು ಕೊಂಡು ನೆಲವನ್ನು ಹೊಡೆ ಎಂದು ಹೇಳಿದನು. ಯೋವಾಷನು ಮೂರು ಸಲ ನೆಲಕ್ಕೆ ಹೊಡೆದನು. "ನೀನು ಐದಾರು ಸಾರಿ ಹೊಡೆಯ ಬೇಕಾಗಿತ್ತು. ಹಾಗೆ ಮಾಡಿದ್ದರೆ ಅರಾಮ್ಯರು ನಿರ್ನಾಮವಾಗಿ ಹೋಗುವವರೆಗೂ ಅವರ ಮೇಲೆ ನಿನಗೆ ಜಯ ದೊರಕುತ್ತಿತ್ತು. ನೀನು ಮೂರೇ ಸಾರಿ ಹೊಡೆದದರಿಂದ ಅವರನ್ನು ಮೂರುಸಾರಿ ಮಾತ್ರ ಸೋಲಿಸುವಿ" ಎಂದು ಅವನಿಗೆ ಎಲೀಷನು ಹೇಳಿದನು (2 ಅರಸು 13:19).

ಯೋವಾಷನ ಕಾರ್ಯವು ದೇವರಿಂದ ಬಂದ ಆಶೀರ್ವಾದದಲ್ಲಿಯ ವಿಶ್ವಾಸದ ಉದಾಹರಣೆಯಾಗಿರುವದಿಲ್ಲ, ಆದರೆ ಕುರುಡು ವಿಧೇಯತೆಯಾಗಿತ್ತು. ಬಾಣವನ್ನು ಎಸೆದು, ನೆಲವನ್ನು ಹೊಡೆಯುವುದರ ಉದ್ದೇಶವನ್ನು ಎಲೀಷನು ಯೋವಾಷನಿಗೆ ತಿಳಿಸಬಹುದಿತ್ತು. ಆಗ ಯೋವಾಷನ ಕಾರ್ಯವು ದೇವರಿಂದ ಬಂದ ಆಶೀರ್ವಾದದಲ್ಲಿ ವಿಶ್ವಾಸದ ಕಾರ್ಯವಾಗುತ್ತಿತ್ತು; ಅವನು ವಿಧೇಯನಾಗುವಾಗ ಅವನಿಗೆ ಜಯವು ಕೊಡಲ್ಪಡುವುದು ಎಂಬ ವಾಗ್ದಾನದ ನೆರವೇರುವಿಕೆಯಾಗುತ್ತಿತ್ತು. ಅವನಿಗೆ ತಿಳಿಸಲ್ಪಡದ್ದರಿಂದ ಮತ್ತು ದೇವರಿಗೆ ವಿಧೇಯವುಳ್ಳವನಾಗಿ ಸ್ವೀಕರಿಸುವ ಆಶೀರ್ವಾದ ವನ್ನು ಅರ್ಥ ಮಾಡಿಕೊಳ್ಳದ ಕಾರಣದಿಂದ, ತನ್ನ ಕೃತ್ಯಗಳಿಗೆ ಬಹುಮಾನ ಕೊಡುವ

ದೇವರಲ್ಲಿ ಅವನಿಗೆ ವಿಶ್ವಾಸವಿರಲಿಲ್ಲ. ಅವನ ಕೃತ್ಯಗಳು ಕುರುಡು ವಿಧೇಯತೆಯ ಪರಿಣಾಮವಾಗಿದ್ದವು.

### (3) ಸಾಧಿಸುವದಕ್ಕಾಗಿ ನಂಬಿಕೆ ಮತ್ತು ಕಾರ್ಯ

ಲಾಭವನ್ನು ಸಾಧಿಸುವದಕ್ಕಾಗಿ ಕಾರ್ಯಮಾಡಲು ಜನರನ್ನು ಪ್ರೇರೇಪಿಸುವ ವಿಶ್ವಾಸದ ಉದಾಹರಣೆಯು ನೋಹನ ನಾವೆ ಕಟ್ಟುವುದಾಗಿದೆ. ನಾವೆಯನ್ನು ಕಟ್ಟುವದರ ಹಾಗೂ ಬರಲಿಕ್ಕಿದ್ದ ಜಲಪ್ರಳಯದಿಂದ ತನ್ನ ಕುಟುಂಬವನ್ನು ರಕ್ಷಿಸುವದರ ಮಧ್ಯದಲ್ಲಿ ಸಂಬಂಧವನ್ನು ನೋಹನು ಅರ್ಥ ಮಾಡಿಕೊಳ್ಳಬೇಕು. ಆದರೇ ದೇವರಿಂದ ಪ್ರಕಟನೆಯಿಲ್ಲದೇ ಜಲಪ್ರಳಯದಿಂದ ತನ್ನ ಕುಟುಂಬವನ್ನು ರಕ್ಷಿಸಲಿಕ್ಕೆ ಒಂದು ನಾವೆಯನ್ನು ಕಟ್ಟುವ ತನ್ನ ಅಗತ್ಯತೆಯನ್ನು ಅವನು ತಿಳಿದಿರಲಿಕ್ಕಿಲ್ಲ. ಜಲಪ್ರಳಯವು ಬರಲಿಕ್ಕಿತ ಎಂದು ದೇವರಲ್ಲಿ ಅವನಿಗೆ ನಂಬಿಕೆಯಿರ ಬೇಕಾಗಿತ್ತು ಮತ್ತು ತನ್ನನ್ನು ತನ್ನ ಕುಟುಂಬವನ್ನು ಹಾಗೂ ಇತರ ಅನೇಕ ಜೀವಿಗಳನ್ನು ಸುರಕ್ಷಿತತೆಗೆ ಒಯ್ಯುವ ನಾವೆಯನ್ನು ಕಟ್ಟುವದಕ್ಕೆ ನಂಬಿಕೆಯಿಂದ ಪ್ರೇರೇಪಿಸಲ್ಪಟ್ಟಿದ್ದನು. ಅವನ ನಂಬಿಕೆಯು ಅವನನ್ನು ಕಾರ್ಯಮಾಡಲು ನಡಿಸಿತು. ಅದು ಲಾಭವನ್ನು ಸಾಧಿಸಿತು: ಅವನನ್ನು ಇತರರನ್ನೂ ರಕ್ಷಿಸಿತು. ದೇವರು ನಾವೆಯನ್ನು ಕಟ್ಟಲಿಲ್ಲ ಇಲ್ಲವೇ ನಾವೆಯನ್ನು ಸುರಕ್ಷಿತ ಸ್ಥಳಕ್ಕೆ ನಡಿಸಲಿಲ್ಲ. ನಾವೆಯನ್ನು ಕಟ್ಟಿದ್ದು ನೋಹನ ಕೆಲಸ, ಹಾಗೂ ಜಲಪ್ರಳಯದ ನೀರು ನಾವೆಯನ್ನು ತೇಲಿಸಿತು.

### (4) ಸಾಧಿಸಲಾರದ ವಿಶ್ವಾಸ ಮತ್ತು ಕಾರ್ಯ

ಹೊಂದಿಕೊಳ್ಳುವ ವಿಶ್ವಾಸವು ದೇವರಲ್ಲಿ ನಂಬಿಕೆಯುಳ್ಳ ಆದರೆ ವಾಗ್ದತ್ತ ಆಶೀರ್ವಾದಗಳೊಂದಿಗೆ ಸಂಬಂಧಿಸಿ ತನ್ನ ಕಾರ್ಯಕ್ಕೆ ಯಾವುದೆ ತಾರ್ಕಿಕ ಸಂಬಂಧವಿಲ್ಲವೆಂದು ಅರಿತುಕೊಂಡ ವ್ಯಕ್ತಿಗೆ ಕೊಡಲ್ಪಟ್ಟ ಆಶೀರ್ವಾದವನ್ನು ಒಳಗೊಂಡಿರುತ್ತದೆ. ಇದಕ್ಕೆ ಒಳ್ಳೆಯ ಉದಾಹರಣೆಯು ಇಸ್ರಾಯೇಲ್ಯರು ಯೆರಿಕೋವಿನ ಗೋಡೆಗಳ ಸುತ್ತ ಸುತ್ತಿದಾಗಿನದಾಗಿರುತ್ತದೆ. ಗೋಡೆಗಳನ್ನು ದೇವರು ಕೆಡವಿ ಹಾಕುವನು ಎಂಬುದರಲ್ಲಿ ನಂಬಿಕೆಯಿಡುವುದು ಮಾತ್ರವಲ್ಲದೇ ಆ ವಿಶ್ವಾಸಕ್ಕೆ ತಕ್ಕ ಕಾರ್ಯವಾಗಿ, ಅವರು ಮಾಡುವ ಕಾರ್ಯಕ್ಕೂ ಪರಿಣಾಮಕ್ಕೂ ಸಂಬಂಧವನ್ನು ನೋಡದೆ, ಗೋಡೆಗಳ ಸುತ್ತ ಸುತ್ತಬೇಕು.

ಇಂಥ ವಿಷಯಗಳಲ್ಲಿ ವಿಶ್ವಾಸಿಯು ತನ್ನ ಕೃತ್ಯಗಳು ಆಶೀರ್ವಾದ ಸಾಧಿಸಲಾರದೆಂದು ತಿಳಿದುಕೊಂಡಿರುವರು. ಆದುದರಿಂದ ಅವನಿಗಾಗಿ ಸಾಧಿಸಲು ದೇವರು ಏನನ್ನು ವಾಗ್ದಾನ ಮಾಡಿರುವನೋ ಅದನ್ನು ಸ್ವೀಕರಿಸುವದಕ್ಕಾಗಿ ದೇವರಲ್ಲಿಯ ತನ್ನ ವಿಶ್ವಾಸದ ಮೇಲೆ ಕಾರ್ಯ ಮಾಡುವನು. ಅಂಥ ವಿಶ್ವಾಸದ ಕಾರ್ಯಗಳ ಅವಶ್ಯಕತೆ ಯಿರುವಾಗ ಒಬ್ಬನು ವಾಗ್ದತ್ತ ಆಶೀರ್ವಾದವನ್ನು ಅರ್ಥ ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದರೆ, ಅವನು ಕುರುಡು ವಿಧೇಯತೆಯಲ್ಲಿ ಕಾರ್ಯ ಮಾಡಬಹುದು. ದೇವರು ಅದನ್ನು ಹೇಗೆ ಮಾಡುವನು ಇಲ್ಲವೇ ಅಪೇಕ್ಷಿತ ರೀತಿಯಲ್ಲಿ ಯಾಕೆ ಕಾರ್ಯ ಮಾಡಬೇಕು ಎಂದು ಅವನು ತಿಳಿಯದಿರಲಿಕ್ಕಿಲ್ಲ, ಆದರೆ ಅವನಿಂದ ಏನು ಅಪೇಕ್ಷಿಸಲ್ಪಟ್ಟಿದೆ ಹಾಗೂ ಆ ವಾಗ್ದಾನವನ್ನು ನೆರವೇರಿಸಲು ದೇವರಲ್ಲಿ ನಂಬಿಕೆಯಿಂದ ಅವನು ಕಾರ್ಯ ಮಾಡುವ ಮೊದಲು ಅವನಿಗೆ ಏನು ವಾಗ್ದಾನ ಮಾಡಲ್ಪಟ್ಟಿದೆ ಎಂಬುದನ್ನು ಅರ್ಥ ಮಾಡಿಕೊಳ್ಳತಕ್ಕದ್ದು. *ವಾಗ್ದಾನ*

*ಮಾಡಲ್ಪಟ್ಟದ್ದನ್ನು ಸ್ವೀಕರಿಸಲು ಒಬ್ಬನು ಕಾರ್ಯ ಮಾಡದಿದ್ದರೆ ಆಗ ಕಾರ್ಯವು ವಾಗ್ದಾನಕ್ಕೆ ಸಂಬಂಧಿಸಿರುವದಿಲ್ಲ. ಆದುದರಿಂದ ವಾಗ್ದಾನ ಮಾಡಿದವರಲ್ಲಿಯ ನಂಬಿಕೆಯ ಕಾರ್ಯವಾಗಿರುವದಿಲ್ಲ.*

### (5) ಇತರರಿಗೆ ಲಾಭವಾಗುವ ವಿಶ್ವಾಸ

ಕಾನಾನ್ ದೇಶವು ಅವರ ಸಂತತಿಯವರಿಗೆ ಕೊಡಲ್ಪಡುವುದು ಎಂದು ದೇವರು ಅಬ್ರಹಾಮ, ಇಸಾಕ ಮತ್ತು ಯಾಕೋಬರಿಗೆ ವಾಗ್ದಾನ ಮಾಡಿದನು (ಆದಿಕಾಂಡ 12:7; 26:3; 35:12). ಇತರರು ಆಶೀರ್ವಾದವನ್ನು ಸ್ವೀಕರಿಸುವವರಾಗಿದ್ದರೂ ದೇವರು ತನ್ನ ವಾಗ್ದಾನವನ್ನು ನೆರವೇರಿಸುವನೆಂಬುದರ ಬಗ್ಗೆ ಅವರಿಗೆ ವಿಶ್ವಾಸವಿತ್ತು. "ಇವರೆಲ್ಲರು ವಾಗ್ದಾನದ ಫಲಗಳನ್ನು ಹೊಂದದೆ ಅವುಗಳನ್ನು ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ ನಂಬಿಕೆಯುಳ್ಳವರಾಗಿ ಮೃತರಾದರು" (ಇಬ್ರಿಯ 11:13).

ಬೇರೆಯವರು ಮಾತ್ರವೇ ಹೊಂದುವ ಲಾಭಗಳಲ್ಲಿ ವಿಶ್ವಾಸದ ಹೆಚ್ಚಿನ ಉದಾಹರಣೆಗಳು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿವೆ. "ನಂಬಿಕೆಯಿಂದಲೇ ಇಸಾಕನು ಯಾಕೋಬನನ್ನೂ ಏಸಾವನನ್ನೂ ಆಶೀರ್ವದಿಸಿದಾಗ ಮುಂದೆ ಸಂಭವಿಸಬೇಕಾದ ಸಂಗತಿಗಳನ್ನು ಸೂಚಿಸಿದನು. ಯಾಕೋಬನು ತಾನು ಸಾಯುತ್ತಿರುವಾಗ ನಂಬಿಕೆಯಿಂದಲೇ ಯೋಸೇಫನ ಮಕ್ಕಳಿಬ್ಬರನ್ನು ಆಶೀರ್ವದಿಸದನು; ತನ್ನ ಕೋಲಿನ ಮೇಲೆ ಬಾಗಿಕೊಂಡು ದೇವರಿಗೆ ನಮಸ್ಕಾರ ಮಾಡಿದನು. ಯೋಸೇಫನು ತೀರಿ ಹೋಗುವಾಗ ಇಸ್ರಯೇಲ್ಯರು ಐಗುಪ್ತ ದೇಶದಿಂದ ಹೊರಡುವದನ್ನು ಕುರಿತು ನಂಬಿಕೆಯಿಂದಲೇ ಮಾತಾಡಿ ತನ್ನ ಶವವನ್ನು ತಕ್ಕೊಂಡು ಹೋಗುವ ವಿಷಯದಲ್ಲಿ ಅಪ್ಪಣೆ ಕೊಟ್ಟನು" (ಇಬ್ರಿಯ 11:20-22). ಈ ಆಶೀರ್ವಾದಗಳು ತಮಗೆ ಬರುವದಿಲ್ಲ ಆದರೆ ಇತರರಿಗೆ ಕೊಡಲ್ಪಟ್ಟಿರುವವು ಎಂಬುದರಲ್ಲಿ ಈ ಜನರಿಗೆ ನಂಬಿಕೆಯಿತ್ತು.

## ಹಳೇ ಒಡಂಬಡಿಕೆಯ ವಿಶ್ವಾಸದ ಉದಾಹರಣೆಗಳು

ತಮ್ಮ ವಿಶ್ವಾಸದ ನಿಮಿತ್ತವಾಗಿ ಆಶೀರ್ವಾದ ಹೊಂದಿದ ಹಳೇ ಒಡಂಬಡಿಕೆಯ ಜನರ ಉದಾಹರಣೆಗಳನ್ನು ಇಬ್ರಿಯ 11 ಕೊಡುತ್ತದೆ. ಸ್ವೀಕರಿಸಲಿಕ್ಕೆ ಆಶೀರ್ವಾದದ ವ್ಯತ್ಯಾಸಗಳಿಲ್ಲದೇ, ಈ ಉದಾಹರಣೆಗಳು ಈ ಕೆಳಗಿನ ಸಂಗತಿಗಳನ್ನು ಒಳಗೊಂಡಿರುತ್ತವೆ: (1) ದೇವರಿಂದ ಒಂದು ಹೇಳಿಕೆ ಅಥವಾ ಆಜ್ಞೆ, (2) ದೇವರು ಹೇಳಿದ್ದನ್ನು ಅರ್ಥ ಮಾಡಿ ಕೊಳ್ಳುವುದು, (3) ಮನುಷ್ಯನ ಭಾಗವಾಗಿ ಅದೃಶ್ಯವಾದ ಸಂಗತಿ, (4) ದೇವರ ವಾಕ್ಯದ ಮನುಷ್ಯನಿಂದ ಸ್ವೀಕಾರ, ಹಾಗೂ (5) ಕಾರ್ಯವು ಅವಶ್ಯವಿದ್ದರೆ ಮನುಷ್ಯನಿಂದ ಯೋಗ್ಯ ಕಾರ್ಯ. ಯಾವ ಉದಾಹರಣೆಯಲ್ಲಿಯೂ ವಿಶ್ವಾಸಕ್ಕೆ ಕುರುಡು ವಿಧೇಯತೆ ಬೇಕಾಗಿದ್ದಿಲ್ಲ, ಬೇಕಾಗಿರುವದಿಲ್ಲ ಅಂದರೆ ಕಾರ್ಯದೊಂದಿಗೆ ಸಂಬಂಧಿಸಿದ ವಾಗ್ದಾನದ ತಿಳುವಳಿಕೆಯಲ್ಲಿ ವಿಶ್ವಾಸವಿಲ್ಲದ ಕೃತಿಯ ಅವಶ್ಯಕತೆಯಿಲ್ಲ.

### ಹೇಬೆಲ

"ನಂಬಿಕೆಯಿಂದಲೇ ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು, ..." (ಇಬ್ರಿಯ 11:4). ಹೇಬೆಲನ ಯಜ್ಞವು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದದ್ದನ್ನಾಗಿ ಯಾವುದು ಮಾಡಿತು ಎಂಬುದರ ಬಗ್ಗೆ ಅನೇಕ ಪ್ರಶ್ನೆಗಳು

ಕೇಳಲ್ಪಟ್ಟಿವೆ.

ಸಮಸ್ಯೆಯು ಮನೋಭಾವನೆಯದಾಗಿದ್ದು ಯಜ್ಞದ ರೀತಿಗೆ ಸಂಬಂಧಿಸಿದ್ದಿಲ್ಲವೆಂದು ಕೆಲವರು ನಂಬುತ್ತಾರೆ. ಭಿನ್ನತೆಯು ಯಜ್ಞವಾಗಿತ್ತೆಂದು ವಾಕ್ಯ ಭಾಗವು ಹೇಳುತ್ತದೆ; ಹೇಬೆಲನು ಕಾಯಿನನಿಕ್ಕಿಂತ "ಶ್ರೇಷ್ಠವಾದ ಯಜ್ಞವನ್ನು" ಅರ್ಪಿಸಿದನು. ಕಾಯಿನನು ಅರ್ಪಿಸಿದ ವಿಧಾನವನ್ನು, ಹೊಲದ ಫಲವನ್ನು ಅರ್ಪಿಸಿದ್ದನ್ನು (ಯಾಜಕಕಾಂಡ 2:1-16) ಧರ್ಮಶಾಸ್ತ್ರವು ಒಪ್ಪಿಕೊಂಡಿತ್ತೆಂದು ಇತರರು ತೋರಿಸುತ್ತಾರೆ. ಇದು ಸತ್ಯವಾಗಿರುವುದು. ಆದರೆ ಧರ್ಮಶಾಸ್ತ್ರವು ಕೊಡಲ್ಪಡುವ ಮೊದಲು ಅಂಥ ಯಜ್ಞಗಳು ಸ್ವೀಕಾರ ಯೋಗ್ಯವಾಗಿದ್ದವೋ?

ಪ್ರಾಣಿ ಯಜ್ಞಗಳು ಮಾತ್ರವೇ (ಕಾಯಿನನ ಯಜ್ಞ ಮಾತ್ರ ವ್ಯತ್ಯಾಸವಾಗಿತ್ತು) ಧರ್ಮಶಾಸ್ತ್ರವು ಕೊಡಲ್ಪಡುವ ಮೊದಲು ದಾಖಲೆಯಾದ ಅರ್ಪಣೆಗಳಾಗಿದ್ದವು. ನೋಹನು ನಾವೆಯನ್ನು ಬಿಟ್ಟು ಬಂದನಂತರ, "ಯಜ್ಞವೇದಿಯನ್ನು ಮಾಡಿ ಅದರ ಮೇಲೆ ಶುದ್ಧವಾದ ಎಲ್ಲಾ ಪಶುಪಕ್ಷಿ ಜಾತಿಗಳಲ್ಲಿ ಸರ್ವಾಂಗ ಹೋಮ ಮಾಡಿದನು" (ಆದಿಕಾಂಡ 8:20). ಅಬ್ರಹಾಮನು ಒಂದು ಟಗರನ್ನು ಹೋಮ ಮಾಡಿದನು (ಆದಿಕಾಂಡ 22:13). ಇಸಾಕನ ಹೇಳಿಕೆಯು ಪ್ರಾಣಿ ಬಲಿಯು ಸಾಮಾನ್ಯವಾಗಿತ್ತೆಂಬುದನ್ನು ಸೂಚಿಸುತ್ತದೆ. ಯಾಕಂದರೆ ಯಜ್ಞಕ್ಕಾಗಿ ಅಬ್ರಹಾಮನು ಸ್ಥಳವನ್ನು ನೋಡಿದಾಗ ಇಸಾಕನು ಅವನಿಗೆ "... ಹೋಮಕ್ಕೆ ಬೇಕಾದ ಕುರಿ ಎಲ್ಲಿ?" ಎಂದು ಕೇಳಿದನು (ಆದಿಕಾಂಡ 22:7). ತಮ್ಮ ಯಜ್ಞಗಳಿಗಾಗಿ ಪಶುಗಳು ಬೇಕೆಂದು ಮೋಶೆಯು ಫರೋಹನಿಗೆ ಹೇಳಿದನು (ವಿಮೋಚನಕಾಂಡ 10:25). ಯಾವುದನ್ನು ಅರ್ಪಿಸಬೇಕೆಂದು ಹೇಳದೇ ಇತರ ವಚನಗಳೂ ಯಜ್ಞಗಳನ್ನು ನಮೂದಿಸುತ್ತವೆ (ಆದಿಕಾಂಡ 31:54; 46:1; ಯೋಬ 1:5).

ಧರ್ಮಶಾಸ್ತ್ರವು ಕೊಡುವದಕ್ಕಿಂತ - ಮೊದಲು ದಾಖಲೆಯಾದ ಯಜ್ಞಗಳ ವಿಧಾನವು ಒಂದೇ ತರದವುಗಳು ಅಂದರೆ ಪ್ರಾಣಿ ಯಜ್ಞಗಳಾಗಿದ್ದದು. ದೇವರು ಪ್ರಾಣಿ ಯಜ್ಞಗಳನ್ನು ಆಜ್ಞಾಪಿಸಿದ್ದನೆಂಬುದನ್ನು ಸೂಚಿಸುತ್ತದೆ. ದೇವರ ಪ್ರಕಾರವಾದ ಚಿತ್ತದಲ್ಲಿ ನಂಬಿಕೆಯಿಂದ (ಗಮನಿಸಿರಿ: ರೋಮಾಪುರ 10:17) ಹೇಬೆಲನು ದೇವರು ಅಪೇಕ್ಷಿಸಿದ ಯಜ್ಞವನ್ನು ಅರ್ಪಿಸಿದನು. ಆದರೆ ಕಾಯಿನನು ತಾನೇ ಆಯ್ದುಕೊಂಡ ಯಜ್ಞವನ್ನು ಅರ್ಪಿಸಿದನು. ಆ ಯಜ್ಞವು ದೇವರಿಗೆ ವಿಧೇಯತೆಯ ಕಾರ್ಯವಾಗಿರಲಿಲ್ಲ.

ಹೇಬೆಲನು ನಂಬಿಕೆಯಿಂದ ತನ್ನ ಯಜ್ಞವನ್ನು ಅರ್ಪಿಸಿದ್ದರಿಂದ ಅವನ ಅರ್ಪಣೆಯು ಕುರುಡು ವಿಧೇಯತೆಯ ಕಾರ್ಯವಾಗಿರಲಿಲ್ಲ. ಅದು ದೇವರನ್ನು ಆರಾಧಿಸುವ ಉದ್ದೇಶಕ್ಕಾಗಿತ್ತು, ಇಲ್ಲವೇ ಪಾಪ ಕ್ಷಮಾಪನೆಗಾಗಿದ್ದ ಅರ್ಪಣೆಯಾಗಿತ್ತು.

**ನೋಹ**

ನೋಹನು ಕುರುಡು ವಿಧೇಯತೆಯಿಂದಲ್ಲ ಆದರೆ ನಂಬಿಕೆಯಿಂದ ಕಾರ್ಯದ ಉದಾಹರಣೆಯಾಗಿದ್ದಾನೆ. ಅವನು ದೇವರಿಂದ ಎಚ್ಚರಿಸಲ್ಪಟ್ಟಿದ್ದರಿಂದ ತಾನು ಯಾಕೆ ನಾವೆಯನ್ನು ಕಟ್ಟುತ್ತಿದ್ದೇನೆಂದು ತಿಳಿದುಕೊಂಡಿದ್ದನು (ಆದಿಕಾಂಡ 6:13-22). ಬರಲಿಕ್ಕಿದ್ದ ಜಲಪ್ರಳಯದ ಬಗ್ಗೆ ಮತ್ತು ನಾವೆಕಟ್ಟುವದರ ಮೂಲಕ ತನ್ನ ಕುಟುಂಬವನ್ನು ಉಳಿಸಿ ಕೊಳ್ಳುವದರ ಬಗ್ಗೆ ದೇವರು ಹೇಳಿದ್ದನ್ನು ಅವನು ನಂಬಿದನು. ಒಂದು ಉದ್ದೇಶಕ್ಕಾಗಿ ಅವನು ನಾವೆಯನ್ನು ಕಟ್ಟಿದನು; ಅದು ತನ್ನನ್ನು, ತನ್ನ ಕುಟುಂಬವನ್ನು ನಾವೆ ಯೊಳಗೆ ಬಂದ ಯಾರೇ ಆಗಲಿ ಅವರನ್ನು ಮತ್ತು ಜೀವಿಸುವ ಪ್ರಾಣಿಗಳನ್ನು ರಕ್ಷಿಸುವುದಾಗಿತ್ತು. ದೇವರು ಹೇಳಿದ್ದರಿಂದ ಅವನು ನಾವೆಯನ್ನು ಕಟ್ಟಿದ್ದರೆ, ಜಲಪ್ರಳ

ಯಕ್ಕಾಗಿ ಸಿದ್ಧವಾಗುವದಾಗಿತ್ತು. ಕೇವಲ ಅದರಲ್ಲಿ ವಾಸಿಸಲು ಹಾಗೆ ಮಾಡಿದ್ದರೆ, ಅವನು ತಪ್ಪಾದ ಉದ್ದೇಶಕ್ಕಾಗಿ ಅವನು ಕಾರ್ಯ ಮಾಡುತ್ತಿರುವನೆಂದು ದೇವರು ತಿಳಿದುಕೊಳ್ಳುತ್ತಿದ್ದನು ಹಾಗೂ ಅವನ ಕಾರ್ಯವನ್ನು ಸ್ವೀಕರಿಸದೇ ಇರುವದರಲ್ಲಿ ಸಂಶಯವಿರುವದಿಲ್ಲ.

**ಅಬ್ರಹಾಮ**

ಅಬ್ರಹಾಮನು ಕುರುಡು ವಿಧೇಯತೆಯಿಂದಲ್ಲ ಆದರೆ ನಂಬಿಕೆಯಿಂದ ಕಾರ್ಯ ಮಾಡಿದ ಇನ್ನೊಂದು ಉದಾಹರಣೆಯಾಗಿದ್ದಾನೆ. ದೇವರು ಅವನಿಗೆ ಮಾರ್ಗದ ಬಗ್ಗೆ ಹೇಳುವದರಿಂದ (ಆದಿಕಾಂಡ 12:1-4) ಅವನು ತನ್ನ ಅಂತಿಮ ಗುರಿಯನ್ನು ತಿಳಿಯ ಬೇಕಾಗಿರದಿದ್ದರೂ ದೇವರು ತನ್ನನ್ನು ಆಶೀರ್ವಾದಿಸುವ ಹಾಗೂ ದೇವರು ಅವನಿಗೆ ಹೋಗಲು ಹೇಳಿದ ಕಡೆಗೆ ಹೋಗುವಾಗ ಅವನನ್ನು ದೊಡ್ಡ ಜನಾಂಗವನ್ನಾಗಿ ಮಾಡುವೆ ನೆಂದು ಹೇಳಿದ ವಾಗ್ದಾನವನ್ನು ಆತನು ನೆರವೇರಿಸುವೆನೆಂದು ಅವನಿಗೆ ನಂಬಿಕೆಯಿತ್ತು. ದೇವರು ವಾಗ್ದಾನ ಮಾಡಿದ್ದನ್ನು ಅವನು ಅರ್ಥ ಮಾಡಿಕೊಂಡನು ಮತ್ತು ನಂಬಿದನು. ಅವನು ಹೊರಗೆ ಹೋದರೆ ತಾನು ಏನು ಮಾಡುವೆನೆಂದು ದೇವರು ಅವನಿಗೆ ಹೇಳಿ ರದಿದ್ದರೆ ಇಲ್ಲವೇ ಹೊರಗೆ ಹೋಗಬೇಕೆಂದು ಮಾತ್ರ ಅವನಿಗೆ ಹೇಳಿದ್ದರೆ ಅವನ ಕಾರ್ಯವು ಕುರುಡು ವಿಧೇಯತೆಯಾಗುತ್ತಿತ್ತು. ಅವನು ಅರ್ಥ ಮಾಡಿಕೊಂಡಿದ್ದರೆ, ದೇವರ ವಾಗ್ದಾನದಲ್ಲಿ ಅವನು ನಂಬಿಕೆಯಿಂದ ಕಾರ್ಯ ಮಾಡಿದನು.

ಅಬ್ರಹಾಮನು ಐಶ್ವರ್ಯವಂತನೂ ಬಲಶಾಲಿಯೂ ಆಗಲು, ತನ್ನ ಬಂಧುಗಳಿಂದ ದೂರ ಹೋಗಲು, ಸಾಹಸದ ಕಾರ್ಯ ಅನುಭವಿಸಲು ಇಲ್ಲವೇ ಬೇರೆ ಇತರ ಕಾರಣ ಗಳಿಗಾಗಿ ಹೊರೆಗೆ ಹೋಗಿದ್ದರೆ, ಅವನು ತಪ್ಪಾದ ಕಾರಣಕ್ಕಾಗಿ ಹೋಗುತ್ತಿದ್ದನು. ನಿಶ್ಚಯವಾಗಿಯೂ ಅಂಥ ಕಾರ್ಯಕ್ಕೆ ದೇವರು ಬಹುಮಾನವನ್ನು ಕೊಡುತ್ತಿರಲಿಲ್ಲ. ಯಾಕಂದರೆ ಹೃದಯಗಳನ್ನು ನೋಡುವ ದೇವರು ತನ್ನ ವಾಗ್ದಾನವನ್ನು ನೆರವೇರಿ ಸಲು ತನ್ನಲ್ಲಿ ವಿಶ್ವಾಸವಿಲ್ಲದೆ ವಾಗ್ದತ್ತ ದೇಶಕ್ಕಾಗಿ ಅಬ್ರಹಾಮನು ಹೋಗುತ್ತಿರುವನೆಂದು ತಿಳಿದು ಕೊಳ್ಳಬಹುದಿತ್ತು.

**ಯೆಹೋಶುವ ಮತ್ತು ಇಸ್ರಯೇಲು**

"ಅವರು ಏಳು ದಿವಸಗಳ ತನಕ ಎರಿಕೋ ಪಟ್ಟಣದ ಗೋಡೆಗಳನ್ನು ಸುತ್ತಿದ ಮೇಲೆ ಅವು ಬಿದ್ದವು" (ಇಬ್ರಿಯ 11:30). ಇಸ್ರಯೇಲು ಕುರುಡು ನಂಬಿಕೆಯಿಂದ ವರ್ತಿಸಲಿಲ್ಲ, ಆದರೆ ಗೋಡೆಗಳ ಸುತ್ತ ತಿರುಗಿದರೆ ಅವು ಬೀಳುವವೆಂದು ಹೇಳಿದ ದೇವರ ವಾಗ್ದಾನವನ್ನು ಅವರು ತಿಳಿದದ್ದರಿಂದ ಮತ್ತು ನಂಬಿದ್ದರಿಂದ ಹಾಗೆ ಮಾಡಿದರು (ಯೆಹೋಶುವ 6:1-5). ದೇವರು ಅವರಿಗೆ ಸುತ್ತು ಹಾಕಬೇಕೆಂದು ಆಜ್ಞಾಪಿಸಿ ಅವರು ಸುತ್ತಿದರೆ ತಾನು ಏನು ಮಾಡುವೆನೆಂದು ಅವರಿಗೆ ಹೇಳಿರದಿದ್ದರೆ ಅವರ ಕಾರ್ಯವು ಕೇವಲ ಕುರುಡು ವಿಧೇಯತೆಯ ಮೇಲೆ ಅವಲಂಭಿಸಿರುತ್ತಿತ್ತು. ಆದರೆ ಗೋಡೆಗಳನ್ನು ಕೆಡವಿ ಹಾಕಲಿಕ್ಕೆ ದೇವರಲ್ಲಿ ನಂಬಿಕೆಯ ಮೇಲೆ ಅವಲಂಭಿಸಿ ಅಲ್ಲ.

ಉದಾಹರಣೆಯು ಸಾಧಿಸಲಿಕ್ಕಾಗಿರುವ ಕಾರ್ಯದ ಮತ್ತು ಆಶೀರ್ವಾದವನ್ನು ಪಡೆಯಲಿಕ್ಕಾಗಿರುವ ಕಾರ್ಯದ ಮಧ್ಯದಲ್ಲಿಯ ಭೇದವನ್ನು ತೋರಿಸುತ್ತದೆ. ಅವರು ತಮ್ಮ ಕಾರ್ಯದ ಹಾಗೂ ಅಪೇಕ್ಷಿತ ಅಂತ್ಯ ಪರಿಣಾಮದ ಮಧ್ಯದಲ್ಲಿ ಸಂಬಂಧವನ್ನು ನೋಡದೇ ಅವರು ನಂಬಿಕೆಯಿಂದ ಕಾರ್ಯ ಮಾಡಿದರು. ದೇವರು ಗೋಡೆಗಳನ್ನು

ಕೆಡವಿ ಹಾಕುವನೆಂದು ನಂಬಿ, ಆಶೀರ್ವಾದವನ್ನು ಸ್ವೀಕರಿಸುವದಕ್ಕಾಗಿ ಅವರು ಗೋಡೆಗಳ ಸುತ್ತಲೂ ಸುತ್ತಿದರು. ಅವರ ವಿಶ್ವಾಸವು ಅವರ ಸ್ವಂತ ಕಾರ್ಯದಲ್ಲಿ ಅಲ್ಲ ಆದರೆ ದೇವರಲ್ಲಿ ಇತ್ತು.

ಯೆಹೋಶುವನು ಮತ್ತು ಇಸ್ರಯೇಲ್ಯರು ಸುತ್ತುವದನ್ನು, ಘೋಷಣೆ ಮಾಡುವದನ್ನು ಹಾಗೂ ಟಗರಿನ ಕೊಂಬುಗಳನ್ನು ಊದುತ್ತಾ ಹೋಗುವದನ್ನು ದೇವರು ಯಾಕೆ ಆಯ್ದುಕೊಂಡನು ಎಂಬುದನ್ನು ಅರ್ಥಮಾಡಿಕೊಳ್ಳಲಿಲ್ಲ. ಅದಾಗ್ಯೂ ನಂಬಿಕೆಯಿರುವ ನಿಮಿತ್ತವಾಗಿ ದೇವರು ಗೋಡೆಗಳನ್ನು ಕೆಡವಿ ಹಾಕುವೆನೆಂದು ವಾಗ್ದಾನ ಮಾಡಿದ್ದಾನೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕಾಗಿತ್ತು. ದೇವರ ವಾಗ್ದಾನವನ್ನು ಅರ್ಥ ಮಾಡಿಕೊಳ್ಳದೇ ಅವರು ಕಾರ್ಯ ಮಾಡಿದ್ದರೆ ಅಥವಾ ಬೇರೆ ಇತರ ಉದ್ದೇಶಕ್ಕಾಗಿ ಸುತ್ತು ಹಾಕಿದ್ದರೆ (ವ್ಯಾಯಮ ಮಾಡಲು ಅಥವಾ ಹೆಜ್ಜೆ ಹಾಕುವದನ್ನು ರೂಢಿಸಲು) ಗೋಡೆಗಳನ್ನು ಕೆಡವಿ ಹಾಕಲು ದೇವರಲ್ಲಿಯ ವಿಶ್ವಾಸದ ನಿಮಿತ್ತ ಅವರು ಕಾರ್ಯ ಮಾಡುತ್ತಿರಲಿಲ್ಲ. ಎಲ್ಲಾ ಹೃದಯಗಳನ್ನು ಬಲ್ಲವನಾದ ದೇವರು, ಅವರು ತನ್ನಲ್ಲಿಯ ವಿಶ್ವಾಸದ ನಿಮಿತ್ತ ಸುತ್ತುತ್ತಿರುವುದಿಲ್ಲ ಎಂಬುದನ್ನು ತಿಳಿದು ಕೊಳ್ಳುತ್ತಿದ್ದನು. ಅವರು ಸುತ್ತು ಹಾಕಿದ್ದರೆ, ಆದರೆ ವಾಗ್ದಾನ ಮಾಡಲ್ಪಟ್ಟದ್ದನ್ನು ಸ್ವೀಕರಿಸುವದಕ್ಕಾಗಿ ಅಲ್ಲದಿದ್ದರೆ, ಆಗ ಅವರ ಕಾರ್ಯವು ವಾಗ್ದಾನಕ್ಕೆ ಸಂಬಂಧಿಸಿದ್ದು ಆಗುತ್ತಿರಲ್ಲಿಲ್ಲ. ಆದುದರಿಂದ, ಅವರ ಕೃತ್ಯದ ಮೇಲೆ ಅವಲಂಭಿಸಿದ ಆತನ ವಾಗ್ದಾನವನ್ನು ನೆರವೇರಿಸಲು ದೇವರಲ್ಲಿಯ ವಿಶ್ವಾಸದ ಕಾರ್ಯವಾಗಿರುವದಿಲ್ಲ. ಹಾಗೆ ಮಾಡುವನೆಂಬ ಆತನಲ್ಲಿ ಅವರ ವಿಶ್ವಾಸದ ನಿಮಿತ್ತ ದೇವರು ಗೋಡೆಗಳನ್ನು ಕೆಡವಿದ್ದರಿಂದ, ಅವರು ಅಂಥ ವಿಶ್ವಾಸ ವಿಲ್ಲದೆ ಸುತ್ತು ಹಾಕಿದ್ದರೆ, ದೇವರು ಗೋಡೆಗಳನ್ನು ಕೆಡವಿ ಹಾಕುತ್ತಿರಲಿಲ್ಲವೆಂದಾಗುತ್ತದೆ.

ನಂಬಿಕೆಯ ಇತರ ಉದಾಹರಣೆಗಳು ಇಬ್ರಿಯ 11ರಲ್ಲಿ ಕಂಡು ಬರುತ್ತವೆ. ಆದರೆ ಇದನ್ನು ತೋರಿಸಲು ಈ ಕೆಳಗಿನವುಗಳು ಸಾಕಷ್ಟಾಗಿವೆ:

(1) ಆಶೀರ್ವಾದವನ್ನು ಒದಗಿಸಲು ತನ್ನಲ್ಲಿ ದೇವರು ನಂಬಿಕೆಯನ್ನು ಕೇಳುವಾಗ, ಆ ವಿಶ್ವಾಸವನ್ನು ಸ್ವೀಕರಿಸಲು ಕುರುಡು ವಿಧೇಯತೆಕ್ಕಿಂತ ಹೆಚ್ಚಾದದ್ದು ಬೇಕಾಗುತ್ತದೆ.

(2) ಕಾರ್ಯಮಾಡಲು ದೇವರಲ್ಲಿ ನಂಬಿಕೆಯುಳ್ಳವರು ಅಗತ್ಯವಾದ ಕಾರ್ಯದ ಮತ್ತು ಆಶೀರ್ವಾದದ ಮದ್ಯದಲ್ಲಿಯ ಸಂಬಂಧವನ್ನು ಯಾವಾಗಲೂ ಅರ್ಥ ಮಾಡಿಕೊಳ್ಳಲಿಲ್ಲ. ಆದರೆ ಅವರು ಕಾರ್ಯಮಾಡಿದರೆ ಏನು ಮಾಡುವೆನೆಂದು ದೇವರು ವಾಗ್ದಾನ ಮಾಡಿದ್ದಾನೆಂಬುದನ್ನು ಅವರು ಅರ್ಥಮಾಡಿಕೊಂಡರು.

(3) ಒಬ್ಬನು ಸ್ವಂತ ಕಾರ್ಯದಿಂದ ಗುರಿಯನ್ನು ಸಾಧಿಸಲು ಕೆಲವು ಸಲ ಕಾರ್ಯವು ನಂಬಿಕೆಗೆ ಬೇಕಾಗುತ್ತದೆ.

(4) ಕೆಲವು ಸಲ ತಾನೇ ಪರಿಣಾಮ ಸಾಧಿಸುವ ಕಾರ್ಯದ ಬದಲಾಗಿ ದೇವರು ತರುವಂಥದ್ದನ್ನು ಸ್ವೀಕರಿಸುವದಕ್ಕಾಗಿ ನಂಬಿಕೆಗೆ ಕಾರ್ಯದ ಅಗತ್ಯತೆಯಿತ್ತು.

(5) ತನ್ನ ವಾಕ್ಯವನ್ನು ನೆರವೇರಿಸಲು ತನ್ನ ವಾಗ್ದಾನದ ಮೇಲೆ ಅವಲಂಭಿಸಿ ಕಾರ್ಯ ಮಾಡಲು ಪ್ರೇರೇಪಿಸುವ ನಂಬಿಕೆಯನ್ನು ದೇವರು ಕೇಳುತ್ತಾನೆ.

## ಯಜ್ಞಗಳಲ್ಲಿ ಉದ್ದೇಶ

ಹಳೇ ಒಡಂಬಡಿಕೆಯಲ್ಲಿ ಯಜ್ಞವನ್ನು ತಂದವರು ಯಾವ ತರದ ಯಜ್ಞಗಳನ್ನು ತರಬೇಕೆಂಬುದನ್ನು ತಿಳಿದು ಕೊಂಡಿದ್ದರಷ್ಟೇ ಅಲ್ಲ, ತಾವು ಅರ್ಪಿಸುವ ಯಜ್ಞದ ಸ್ಪಷ್ಟ ವಾದ ಉದ್ದೇಶವನ್ನು ಅರ್ಥ ಮಾಡಿಕೊಂಡಿದ್ದರು.

ಇಸ್ರಾಯೇಲ್ಯರಿಗೆ ಅವರ ಅರ್ಪಣೆಗಳಿಗಾಗಿ ವಿವಿಧ ಯಜ್ಞಗಳೂ ಉದ್ದೇಶಗಳೂ ಇದ್ದವು. ಕನಿಷ್ಠ ಪಕ್ಷ ಐದು ಅರ್ಪಣೆಗಳನ್ನು ಕೊಡಬಹುದಾಗಿತ್ತು: (1) ದಹನ ಬಲಿ (ಯಾಜಕಕಾಂಡ 1); (2) ಧಾನ್ಯ ಸಮರ್ಪಣೆ (ಯಾಜಕಾಂಡ 2); (3) ಸಮಾಧಾನದ ಸಮರ್ಪಣೆ (ಯಾಜಕಕಾಂಡ 3); (4) ದೋಷ ಪರಿಹಾರಕ ಬಲಿ (ಯಾಜಕಕಾಂಡ 4); (5) ಪ್ರಾಯಶ್ಚಿತ್ತ ಬಲಿ (ಯಾಜಕಕಾಂಡ 5). ಇತರ ಅರ್ಪಣೆಗಳು ವಿಶೇಷ ಸಂದರ್ಭಗಳಿಗೆ ಕೊಡಲ್ಪಟ್ಟಿರುವೆವು, ಅವುಗಳಲ್ಲಿ ಪ್ರಥಮ ಫಲಗಳು, ಮಗುವಿನ ಜನನ, ರೋಗದಿಂದ ಶುದ್ಧೀಕರಣ, ಮತ್ತು ಯಾಜಕರ ಪ್ರತಿಷ್ಠೆಗಳು ಒಳಗೊಂಡಿದ್ದವು. ಪ್ರತಿಯೊಂದು ಅರ್ಪಣೆಯು ವಿಶೇಷವಾದ ರೀತಿಯಲ್ಲಿ ಇರಬೇಕಾಗಿತ್ತು; ಪ್ರತಿಯೊಂದಕ್ಕೂ ವಿಶೇಷವಾದ ಉದ್ದೇಶವಿತ್ತು.

ಅರ್ಪಣೆಯ ಉದ್ದೇಶವು ಅರ್ಪಣೆಯ ಅವಶ್ಯಕ ಭಾಗವಾಗಿತ್ತು. ಉದ್ದೇಶವಿಲ್ಲದೇ ಪಾಪ ಮಾಡಿದ ವ್ಯಕ್ತಿಯು "ತಾನು ಮಾಡಿದ ತನ್ನ ಪಾಪಕ್ಕಾಗಿ" ಪ್ರಾಣಿಯನ್ನು ತರ ಬೇಕಾಗಿತ್ತು (ಯಾಜಕಕಾಂಡ 4:28). ಇತರ ಉದ್ದೇಶಗಳಿಗಾಗಿಯೂ ಅವರು ಅರ್ಪಣೆಗಳನ್ನು ತರಬಹುದಿತ್ತು. ಆದರೆ ಪಾಪ ಮಾಡುವವನು ಯಜ್ಞಕ್ಕಾಗಿ ಅವನು ಅದನ್ನು ತಾನು ಮಾಡಿದ ಪಾಪಕ್ಕಾಗಿ ಅರ್ಪಿಸಬೇಕಾಗಿತ್ತು. ದೇವರು ಆಜ್ಞಾಪಿಸಿದ ಕಾರಣದಿಂದ ಮಾತ್ರವೇ ಯಜ್ಞವನ್ನು ಅರ್ಪಿಸುವುದು ಸಾಕಷ್ಟಾದದ್ದಾಗಿರುವದಿಲ್ಲ. ಅವನು ಮಾಡಿದ ಪಾಪಕ್ಕಾಗಿ ಯಜ್ಞವು ಇರಬೇಕಾಗಿತ್ತು. ಯಜ್ಞಗಳನ್ನು ಅರ್ಪಿಸಬಹುದಿತ್ತು ಆದರೆ ಸರಿಯಾದ ಕಾರಣಕ್ಕಾಗಿ ಅಲ್ಲ. ಒಂದು ಯಜ್ಞವನ್ನು ಅರ್ಪಿಸುವುದರಿಂದ ದೇವರಿಗೆ ವಿಧೇಯರಾಗುತ್ತಿರಬಹುದು, ಆದರೆ ಅದೇ ಸಮಯದಲ್ಲಿ ಸರಿಯಾದ ಉದ್ದೇಶಕ್ಕಾಗಿ ಯಜ್ಞವನ್ನು ಅರ್ಪಿಸದೇ ಇರುವದರಿಂದ ದೇವರಿಗೆ ಅವಿಧೇಯರಾಗುತ್ತಿರ ಬಹುದು.

*ಕೃತಿಯ ಹಿಂದೆ ಇರುವ ಉದ್ದೇಶವು ಕಾರ್ಯದಷ್ಟೇ ವಿಶ್ವಾಸದ ಮತ್ತು ವಿಧೇಯತೆಯ ಭಾಗವಾಗಿರುವುದು. ತಪ್ಪಾದ ಉದ್ದೇಶದಿಂದ ಸರಿಯಾದ ಕಾರ್ಯ ಮಾಡುವ ವ್ಯಕ್ತಿಯು ತಪ್ಪು ಕಾರ್ಯ ಮಾಡುವ ಅಥವಾ ಯಾವುದೇ ಕಾರ್ಯ ಮಾಡದ ವ್ಯಕ್ತಿಯಂತೆ ಅವಿಧೇಯನಾಗಿರುವನು.*

## ಹೃದಯ ಮತ್ತು ಯಜ್ಞ

ಇನ್ನೊಂದು ಮಹತ್ವದ ವಿಚಾರವು ಯಜ್ಞವನ್ನು ಅರ್ಪಿಸುವವನ ಮನೋಭಾವನೆ. ವಿಧೇಯತೆಯ ಸಾಮಾನ್ಯ ವಿಷಯದಂತೆ ಯಜ್ಞವನ್ನು ಬರಿದಾದ ಧರ್ಮಾಚರಣೆ ಮತ್ತು ಧಾರ್ಮಿಕ ವಿಧಿಯಂತೆ ದೇವರು ಆಜ್ಞಾಪಿಸಲಿಲ್ಲ. ಅರ್ಪಣೆಗಳಲ್ಲಿಯೂ ಯಜ್ಞಗಳಲ್ಲಿಯೂ ಒಳಗೊಂಡಿರುವವರು ಅವುಗಳ ಉದ್ದೇಶವನ್ನೂ ಅರ್ಥವನ್ನೂ ತಿಳಿದುಕೊಂಡಿರ ಬೇಕೆಂದು ದೇವರು ನಿರೀಕ್ಷಿಸುವುದು ಸ್ಪಷ್ಟವಾಗಿದೆ. ಅರ್ಥ ಮಾಡಿಕೊಳ್ಳದೇ ಇರುವವರು ಹಾಗೂ ಆಂತರಿಕವಾಗಿ ಒಳಗೊಳ್ಳದೇ ಇರುವವರು ದೇವರು ಬಯಸುವ ಉತ್ತರವನ್ನು ಕೊಡಲಾರರು.

ದೇವರು ಯಜ್ಞದಲ್ಲಿ ಮಾತ್ರವೇ ಸಂತುಷ್ಟನಾಗಲಿಲ್ಲ - ಯಜ್ಞವನ್ನು ಅರ್ಪಿಸುವವನೊಳಗೆ ಜಜ್ಜಿಹೋದ ಮನಸ್ಸನ್ನೂ ಕುಗ್ಗಿ ಹೋದ ಹೃದಯವನ್ನೂ ನಿರೀಕ್ಷಿಸುತ್ತಾನೆ.

> ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ, ಇದ್ದರೆ ಸಮರ್ಪಿಸೇನು; ಸರ್ವಾಂಗ ಹೋಮಗಳಲ್ಲಿ ನಿನಗೆ ಸಂತೋಷವಿಲ್ಲ. ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟ ಯಜ್ಞ; ದೇವರೇ, ಪಾಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ (ಕೀರ್ತನೆ 51:16, 17).

ಮೃದುವಾದ ಹೃದಯವುಳ್ಳ ಯಾವುದೇ ವ್ಯಕ್ತಿಯು ನಿರಪರಾಧಿ, ದೋಷವಿಲ್ಲದ ಪ್ರಾಣಿಯನ್ನು ಕೊಲ್ಲುವಾಗ, ಅದು ತಾನು ಪಾಪ ಮಾಡಿದ್ದಕ್ಕಾಗಿ ಸಾಯುವದೆಂದು ಅರ್ಥ ಮಾಡಿಕೊಂಡು ಆಂತರ್ಯದಲ್ಲಿ ನೋವನ್ನು ಅನುಭವಿಸುತ್ತಾನೆ. ಹೀಗೆ ಅವನು ತನ್ನ ಮಾರ್ಗಗಳನ್ನು ಸುಧಾರಿಸಲು ಪ್ರೇರೇಪಿಸಲ್ಪಡುವನು. ಯಜ್ಞಾರ್ಪಣೆಯ ನಿಮಿತ್ತವಾಗಿ ಯಜ್ಞವರ್ಪಿಸುವ ಮತ್ತು ಮನೋಭಾವನೆಗಳಿಂದ ಇರುವ ಯಜ್ಞಗಳನ್ನು ಅಪೇಕ್ಷಿಸುತ್ತಾನೆಂದು ಅನೇಕ ವಾಕ್ಯಗಳು ಬೋಧಿಸುತ್ತವೆ (ಕೀರ್ತನೆ 40:6-8; 51:16, 17; ಯೆಶಾಯ 1:10-14; 66:3; ಯೆರೆಮೀಯ 6:19, 20; 7:22, 23; ಹೋಶೇಯ 6:6; ಆಮೋಸ 5:21-24; ಮೀಕ 6:6-8).

"ಯಥಾರ್ಥ ಚಿತ್ತವೇ ನಿನಗೆ ಸಂತೋಷ ..." (ಕೀರ್ತನೆ 51:6). ಆಂತರ್ಯದಲ್ಲಿಯ ಸತ್ಯದೊಂದಿಗಿನ ಹೃದಯದಿಂದ ಬಂದ ಯಜ್ಞವನ್ನು ದೇವರು ಬಯಸುತ್ತಾನೆ (ಜ್ಞಾನೋಕ್ತಿಗಳು 16:2; 21:2).

## ಮುಕ್ತಾಯ

ಕೆಲವರ ವಿಷಯದಲ್ಲಿ ದೇವರು ಕುರುಡು ವಿಧೇಯತೆಯನ್ನು ಕೇಳಿದನು. ಆದರೆ ಸಾಮಾನ್ಯವಾಗಿ ಆತನು ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸಲಿಕ್ಕೆ ತನ್ನಲ್ಲಿ ನಂಬಿಕೆಯನ್ನು ಬಯಸಿದನು. ಅಂಥ ವಿಶ್ವಾಸವು ಸರಿಯಾದ ಕಾರ್ಯವನ್ನಷ್ಟೇ ಅಲ್ಲ, ದೇವರ ಚಿತ್ತವನ್ನು ಅರ್ಥಮಾಡಿಕೊಳ್ಳುವದನ್ನು, ಆತನು ವಾಗ್ದಾನ ಮಾಡಿದ್ದನ್ನು ಮಾಡುವದಕ್ಕೆ ದೇವರಲ್ಲಿ ನಂಬಿಕೆಯನ್ನೂ ಹೃದಯದ ಸರಿಯಾದ ಉದ್ದೇಶವನ್ನೂ ಮನೋಭಾವನೆಯನ್ನೂ ಒಳಗೊಂಡಿತ್ತು.

© 2009 Truth for Today